## ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ
ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,

ಸಿ.ಸಿ. ನಂಃ **5368/2023**

ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ (ಗ್ರಾ) ಪೊಲೀಸ್ ಠಾಣೆ

**// ವಿರುದ್ಧ //**

ಆರೋಪಿ ಃ ಶಂಕರ ಮತ್ತು ಇತರರು.

### ದೋಷಾರೋಪಣೆ

ನಾನುಃ ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ ಆದ ನಾನು ಆರೋಪಿಗಳಾದ

| | |
|---|---|
| ಆರೋಪಿ 1. | ಶಂಕರ ತಂದೆ ಶರಣಪ್ಪ ಗೋಸಿ, ವಃ 54 ವರ್ಷ, ಉಃ ಒಕ್ಕಲುತನ,<br>ಸಾಃ ಕೋಲಿವಾಡ ತಾಃ ಜಿಃ ಯಾದಗಿರಿ. |
| 2. | ಸಾಬಣ್ಣ ತಂದೆ ಮಹಾದೇವಪ್ಪ ಬಾಡಿಯಾಳ, ವಃ 50 ವರ್ಷ, ಉಃ ಒಕ್ಕಲುತನ,<br>ಸಾಃ ಕೋಲಿವಾಡ ತಾಃ ಜಿಃ ಯಾದಗಿರಿ. |
| 3. | ಮಹಾದೇವಪ್ಪ ತಂದೆ ಬಸ್ಸಣ್ಣ ಗಣಪೂರ, ವಃ 58 ವರ್ಷ, ಉಃ ಒಕ್ಕಲುತನ,<br>ಸಾಃ ಗಣಪೂರ ತಾಃ ಗುರುಮಿಠಕಲ್ ಜಿಃ ಯಾದಗಿರಿ. |

**ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಏನೆಂದರೆ,**

ಮೊದಲನೆಯದಾಗಿ ದಿನಾಂಕಃ 08-02-2023 ರಂದು ಸಾಃ 04-00 ಗಂಟೆಗೆ ಯಾದಗಿರಿ (ಗ್ರಾ) ಪೋಲಿಸ್ ಠಾಣೆ ಸರಹದ್ದಿಲ್ಲಿ ಬರುವ ಯಾದಗಿರಿ (ಬಿ) ಗ್ರಾಮದ ಹೊಲ ಸರ್ವೆ ನಂ. 40 ರಲ್ಲಿ ಆರೋಪಿತರಾದ ನೀವು ಚಾಸಾಃ1 ನೇದ್ದವನ ಹೊಲದ ಪ್ಲಾಟುಗಳಲ್ಲಿ ಅಕ್ರಮವಾಗಿ ಪ್ರವೇಶ ಮಾಡಿ ಪ್ಲಾಟುಗಳಲ್ಲಿ ಹಾಕಿದ ಕಲ್ಲುಗಳನ್ನು ಕಿತ್ತಿ ಹಾಕಿದ್ದು, ಈ ಮೂಲಕ ನೀವು ಭಾ.ದಂ.ಸಂ. 447 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ 1 ನೇ ಆರೋಪಿಯಾದ ನೀನು ಚಾಸಾಃ 1 ರವರಿಗೆ ಲೇ ಸೂಳೆ ಮಗನೆ ನಿಂದ್ರಲೇ ಎಲ್ಲಿಗೆ ಹೋಗುತಿದ್ದಿ ಅಂತಾ ಅಡ್ಡಗಟ್ಟಿ ನಿಲ್ಲಿಸಿದ್ದು, ಈ ಮೂಲಕ ಭಾ. ದಂ. ಸಂ. ಕಲಂ 341 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ 2 ಮತ್ತು 3 ನೇ ಆರೋಪಿತರಾದ ನೀವು ಚಾಸಾಃ 1 ರವರಿಗೆ ಕೈಯಿಂದ ಕಪಾಳಕ್ಕೆ ಹೊಡೆದಿದು, ಈ ಮೂಲಕ ಭಾ. ದಂ. ಸಂ. ಕಲಂ 504 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

4. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಚಾಸಾ 1 ರವರಿಗೆ ನಮ್ಮ ಪ್ಲಾಟುಗಳಿಗೆ ಹಾಕಿದ ಕಲ್ಲನ್ನು ಯಾಕೆ ಕಿತ್ತಿ ಹಾಕಿದ್ದಿ ರಿ ಅಂತಾ ಕೇಳಿದಾಗ ಆರೋಪಿತರಾದ ನೀವು ಚಾಸಾಃ1 ರವರನ್ನು ಎದೆಯ ಮೇಲಿನ ಅಂಗಿ ಹಿಡಿದು ದಬ್ಬಾಡಿ ಲೇ ಸೂಳೆ ಮಗನೆ ಅಂತಾ ಅವಾಚ್ಯ ಶಬ್ದದಿಂದ ಬೈದಿದ್ದು, ಈ ಮೂಲಕ ಭಾ. ದಂ. ಸಂ. ಕಲಂ 504 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

5. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಚಾಸಾಃ 1 ರವರಿಗೆ ಇದು ನಮ್ಮ ಜಾಗ ನೀವು ಇಲ್ಲಿಂದ ಜಾಗ ಖಾಲಿ ಮಾಡಿರಿ ಇಲ್ಲವಾದರೆ ನಿನಗೆ ಜೀವ ಖಲಾಸ ಮಾಡುತ್ತೇವೆ ಸೂಳೆ ಮಗನೆ ಅಂತಾ ಜೀವದ ಬೆದರಿಕೆ ಹಾಕಿದ್ದು, ಈ ಮೂಲಕ ಭಾ. ದಂ. ಸಂ. ಕಲಂ 506 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

ದಿನಾಂಕಃ **11-09-2024**
ಸ್ಥಳಃ ಯಾದಗಿರಿ

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು ಯಾದಗಿರಿ.